Sri Kadidal MANJAPPA.—I have not got that information just now.

ಶ್ರೀ ಕೊಟ್ರ ಬಸವನಗೌಡ.—ವಿಲೀನವಾದ ಮೇಲೆ ಎಷ್ಟು ಜನ ಅಧಿಕಾರಿಗಳಿಗೆ ನೀವು ಉದ್ಯೋಗ ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಪಟ್ಟಿಯನ್ನು ಕೊಟ್ಟಿದೆ.

ಶ್ರೀ ಕೊಟ್ರ ಬಸವನಗೌಡ.—ಹೊಸದಾಗಿ ನೇಮಕ ಮಾಡಿದ್ದು ಎಷ್ಟು ಜನರನ್ನು ?

ಶ್ರೀ ಕಡಿದಾಳ್ ಮಂಜಪ್ಪ.—ವಿಲೀನವಾದಮೇಲೆ 270 ಜನರನ್ನು ನೇಮಕ ಮಾಡಿದ್ದೇವೆಂದು ತಿಳಿಸಿದೆ.

ಶ್ರೀ ಕೊಟ್ರ ಬಸವನಗೌಡ.—ಹೀಗೆ ನೇಮಕವಾದವರ ಹೆಸ್ರುಕಿ, ಎಷ್ಟು ಜನರನ್ನು ರಿಟ್ರೆಂಚ್ ಆದವರ ಹೆಸ್ರುಕಿ ತಗೆದುಕೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಇಪ್ಪತ್ತು ಜನರನ್ನು ತೆಗೆದುಕೊಂಡಿದೆ.

ಶ್ರೀ ಕೊಟ್ರ ಬಸವನಗೌಡ.—ಬಾಕಿ ಜನರನ್ನು ಯಾವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲಸಗಳು ಬಾಲಿ ಬಿದ್ದಂತೆ ಅವರಿಗೆ ಆಯಾ ಕೆಲಸಕ್ಕೆ ಅವಶ್ಯಕವಾದ ಅರ್ಹತೆಯಿದ್ದರೆ ರೂಲ್ಸ್ ಪ್ರಕಾರ ತೆಗೆದುಕೊಳ್ಳುತ್ತೇವೆ.

ಶ್ರೀ ಕೊಟ್ರ ಬಸವನಗೌಡ.—ಹಾಗಿದ್ದರೆ ಮುಂಚೆ ಅವರಿಗೆ ಕೆಲಸ ಕೊಟ್ಟಾಗ ಅರ್ಹತೆಯಿಲ್ಲದಿದ್ದರೂ ತೆಗೆದುಕೊಂಡಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಹಂಗಾಮಿ ಇರಬಹುದು.

ಶ್ರೀ ಕೊಟ್ರ ಬಸವನಗೌಡ.—Retrench ಮಾಡಲ್ಪಟ್ಟವರನ್ನು ಇನ್ನು ಮೇಲಾದರೂ preference ಕೊಟ್ಟು ತೆಗೆದುಕೊಳ್ಳುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್ ಪ್ರಕಾರ ಮಾಡುತ್ತೇವೆ. ಮೈಸೂರು ಸ್ಟೇಟ್‌ನಲ್ಲಿ ಇಂತಹ ನಂದರ್ಭಗಳಲ್ಲಿ ಯಾವ ರೀತಿ ಅವಕಾಶವನ್ನು ಒದಗಿಸಿಕೊಟ್ಟಿದ್ದೇವೊ ಅವರಿಗೂ ಅದೇ ರೀತಿ ಅವಕಾಶವನ್ನು ಒದಗಿಸಿಕೊಟ್ಟಿದ್ದೇವೆ.

Sri Ijari SIRASAPPA.—What was the reason for retrenching 99 posts ?

Sri Kadidal MANJAPPA.—The reason is : general amnesty granted to the prisoners by the Andhra Government and then the abolition of certain temporary posts.

Sri Ijari SIRASAPPA.—May I take it that all the 99 were retrenched from the Jail Department ?

Sri Kadidal MANJAPPA.—As I submitted already, in some cases, especially in the Civil Supplies and Textiles, temporary posts were abolished and therefore retrenchment was necessary.

Sri Ijari SIRASAPPA.—Was there not sufficient work for all these people before the merger ?

Sri Kadidal MANJAPPA.—There was. But there was not much after merger.

Sri Ijari SIRASAPPA.—What was the reason to think that there is not much work after the merger ?

Sri Kadidal MANJAPPA.—I have given the reason. After general amnesty the strength in the Jail was reduced and there was no work for the officials.

Sri Ijari SIRASAPPA.—Has it been brought to the notice of the Government that the work is being delayed too much because of the inadequate staff there ?

Sri Kadidal MANJAPPA.—No.

Sri Ijari SIRASAPPA.—Is it a fact that the travelling allowance for the Bellary District Servants has been reduced ?

Sri Kadidal MANJAPPA.—That has been done perhaps with the idea of bringing it to the level of the Mysore State Travelling Allowance.

Sri Ijari SIRASAPPA.—Is it a fact that the dearness allowances have been cut ?

Sri Kadidal MANJAPPA.—There is no cut straightaway. But gradually, the dearness allowance will be brought down to the Mysore level.

Sri Ijari SIRASAPPA.—Is it a fact that the salaries of Government servants in Bellary District have also been reduced ?

Sri Kadidal MANJAPPA.—No.

ಶ್ರೀ ಎಂ. ರಾಜಶೇಖರಮೂರ್ತಿ.—ಹೊಸದಾಗಿ appoint ಮಾಡುವಾಗ retrench ಆದವರಿಗೆ first preference ಕೊಡಬೇಕೆಂಬುದು ನರಕಾರದ ನೀತಿಯಲ್ಲವೇ ?

Sri Kadidal MANJAPPA.—Yes. Subject to qualifications and other conditions.

ಶ್ರೀ ಎಂ. ಚಿಕ್ಕಲಿಂಗಯ್ಯ.—Scheduled Castes District Welfare Officer ಹುದ್ದೆ ಅಲ್ಲಿ ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಒಬ್ಬರು ಇದ್ದಾರೆ ಎಂದು ನನ್ನ ನೆನಪು.

ಶ್ರೀ ಎಂ. ಚಿಕ್ಕಲಿಂಗಯ್ಯ.—Record ನಲ್ಲಿ ಅದನ್ನು ನೂಚಿಸಿಲ್ಲ. ಅದಕ್ಕೋಸ್ಕರ ಅದನ್ನು ತೆಗೆದು ಹಾಕಿದ್ದೀರಾ ಎಂದು ಕೇಳುತ್ತಿದ್ದೇನೆ.

(ಉತ್ತರವಿಲ್ಲ)

Chamarajeswara Temple at Chamarajanagar.

Q.—453. Sri U. M. MADAPPA (Chamarajanagar).—

Will the Government be pleased to state :—

(a) the income derived every year from the inam villages granted in

(SRI U. M. MADAPPA)

favour of Chamarajeswara Temple at Chamarajanagar;

(*b*) the expenditure incurred every year for this temple (itemwar particulars to be furnished);

(*c*) the extent of fund now kept in reserve in the name of the said temple?

A.—**Sri Kadidal MANJAPPA** (Minister for Revenue and Public Works).—

(*a*) Rs. 33,544 per annum.

(*b*) Rs. 36,051-2-0. For details *vide* the Statement appended to G. O. No. S. R. 6440-42—Muz. 126-50-4, dated 11th January 1951 (copy placed on the table).

(*c*) Rs. 2,519-6-0 is provided as reserve for repairs and reserve fund in the scale of income and expenditure for the temple, besides a sum of Rs. 95,800 in different securities.

ಶ್ರೀ ಯು. ಎಂ. ಮಾದಪ್ಪ.—ಚಾಮರಾಜೇಶ್ವರ ದೇವಸ್ಥಾನಕ್ಕೆ ಇರತಕ್ಕ ಇನಾಂಗ್ರಾಮಗಳಿಂದ ಬರತಕ್ಕಂಥ ಉತ್ಪತ್ತಿಯಲ್ಲಿ ಕೆಲವು ಭಾಗಗಳನ್ನು ಗ್ರಾಮದಲ್ಲರತಕ್ಕಂಥ, ರಸ್ತೆ, ಕೆರೆಗಳ ಮತ್ತು ಇತರ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಇದು ದೇವಸ್ಥಾನಗಳಿಗೆ ಸಂಬಂಧಪಟ್ಟ ಹಣ; ಕೆರೆ, ಕಾಮಗಾರಿಗೆ ವಿನಿಯೋಗಿಸುವುದು ಉದ್ದೇಶವಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಇನಾಮುಗ್ರಾಮದಿಂದ ಬರತಕ್ಕ ಉತ್ಪತ್ತಿಯನ್ನು ತಾನೆ ಈ ದೇವಸ್ಥಾನಕ್ಕೆ ಖರ್ಚುಮಾಡುತ್ತಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಗ್ರಾಮದಲ್ಲರತಕ್ಕ ಕೆರೆಗಳ ದುರಸ್ತನ್ನು ಮಾಡಬೇಕಾದರೆ ಈ ವಿಚಾರವನ್ನು ಯೋಚನೆಮಾಡಬೇಕು. ಇಲ್ಲವಾದರೆ ಇಂತಹ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಆ ಗ್ರಾಮಗಳಲ್ಲಿ ಏನಾದರೂ ಕೆರೆಗಳ ದುರಸ್ತು ಆಗಬೇಕಾಗಿದ್ದರೆ ಸರ್ಕಾರವ ಖರ್ಚಿನಿಂದ ಮಾಡಬೇಕೋ ಅಥವಾ ದೇವಸ್ಥಾನದ ಉತ್ಪತ್ತಿಯಿಂದ ಬರತಕ್ಕ ಹಣದಿಂದ ಮಾಡಬೇಕೋ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್ ಪ್ರಕಾರ ರೈತರು ಮತ್ತು ಇನಾಮುದಾರರು ಆ ಖರ್ಚನ್ನು ಕೊಡಬೇಕಾಗಿದೆ.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ ಈ ದೇವಸ್ಥಾನವೂ ಸಹ ಇನಾಮುದಾರರು ತಾನೇ? ಈ ಗ್ರಾಮಗಳಲ್ಲಿ ಈಗ ಏನಾದರೂ ಕೆರೆಗಳ ದುರಸ್ತು ಆಗಬೇಕಾದರೆ ಅದಕ್ಕೆ ಯಾರು ಜವಾಬ್ದಾರರು?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್ ಪ್ರಕಾರ ಯಾರು ಜವಾಬ್ದಾರರು ಎಂದು ಇದೆಯೋ ಅವರೇ ಜವಾಬ್ದಾರರು.

ಶ್ರೀ ಯು. ಎಂ. ಮಾದಪ್ಪ.—ದೇವಸ್ಥಾನದಲ್ಲಿ ಖರ್ಚು, ಮತ್ತು ಉತ್ಪತ್ತಿ ಸಮನಾಗಿರುವುದರಿಂದ ಅಂತಹ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ ವೆಂಬುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಸಲಹೆಯನ್ನು ಸರಕಾರದವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಈ ವಿಷಯದಲ್ಲಿ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರೆಂದು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಈ ಪ್ರಶ್ನೆಯನ್ನು ಪರಿಶೀಲನೆ ಮಾಡಬೇಕು. ಆದುದರಿಂದ ನಿರ್ದಿಷ್ಟವಾಗಿ ಈಗ ಇನ್ನೇನನ್ನೂ ಹೇಳಲಾರೆ.

ಶ್ರೀ ಯು. ಎಂ. ಮಾದಪ್ಪ.—ದೇವಸ್ಥಾನದ ಖರ್ಚನ್ನು ಕಡಮೆ ಮಾಡುವುದಕ್ಕೆ ಸಾಧ್ಯವಿಲ್ಲದೆ, ಕೆರೆಗಳ ಆಬಾದು ವಗೈರೆಮಾಡುವುದು ಅತ್ಯಾವಶ್ಯಕವಾದರೆ ಅದನ್ನು ಮಾಡಿಸಲು ಸರ್ಕಾರ ಸಿದ್ಧವಾಗಿದೆಯೇ?

Sri Kadidal MANJAPPA.—It is a hypothetical question. I have already submitted that I am going to examine the suggestion made by the Hon'ble Member.

ಶ್ರೀ ಬಿ. ರಾಚಯ್ಯ.—ಜೋಡಿಗ್ರಾಮಗಳಲ್ಲಿ ಕೆರೆ ರಿಪೇರಿಮಾಡುವುದಕ್ಕೋಸ್ಕರ ಇನಾಮುದಾರರು ಯಾವ ಒಂದು ಪೊಬಲಗನ್ನು ಕೊಡಬೇಕಾಗಿದೆಯೋ ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ ರಿಪೇರಿ ನಿಂತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Sri Kadidal MANJAPPA.—If it is with reference to this question, I do not know.

ಶ್ರೀ ಬಿ. ರಾಚಯ್ಯ.—ಈ ಸಂದರ್ಭದಲ್ಲಿ ಉತ್ಪತ್ತಿ ಮತ್ತು ಖರ್ಚು ಎರಡೂ ಸಮನಾಗಿರುವುದರಿಂದ ಪೂರ್ತಿ ಖರ್ಚನ್ನು ಸರ್ಕಾರವೇ ಹಾಕಿ ಕೆರೆ ರಿಪೇರಿಗಳನ್ನು 33 ಗ್ರಾಮಗಳಲ್ಲಿ ಮಾಡಿಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನಿರ್ದಿಷ್ಟವಾಗಿ ಹೇಳಲಾರೆ. ಇನಾಮುಗ್ರಾಮಗಳಲ್ಲಿ ಕೆರೆಗಳನ್ನು ಜೀರ್ಣೋದ್ಧಾರಮಾಡುವಾಗ ಕೆಲವು ನಿಯಮಗಳಿವೆ. ಆ ನಿಯಮಗಳಿಗನುಸಾರವಾಗಿ ಸರ್ಕಾರದವರು ನಡೆದುಕೊಳ್ಳಬೇಕಾಗಿದೆ.

Survey No. 62 of Hullepura and Survey No. 99 of Bombalapura (unauthorised cultivation).

Q.–617. **Sri H. K. SHIVARUDRAPPA** (Gundlupet-Heggadadevanakote).—

Will the Government be pleased to state :—

(*a*) whether it has come to their notice that the lands in Survey No. 62 of Hullepura and Survey No. 99 of Bombalapura are being unauthorisedly cultivated;

(*b*) if so, since how many years they are thus cultivating;

(*c*) having knowledge of the unauthorised cultivation, the reason for not taking action either to make over the lands to them alone or to make them relinquish the lands?